**ಡಿ ಡಬ್ಲ್ಯೂ 1**

**ದಿನಾಂಕಃ 06-08-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಪಿ ವಿ ಕೆ ವಕೀಲರಿಂದಃ**

1. ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾಖಲಾಗಿದ್ದ ಸಿಸಿ ನಂಃ 176/2018, 817/2018 ಮತ್ತು 818/2018 ಪ್ರಕರಣಗಳಲ್ಲಿ ನಾನು ರಾಜಿ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ದೂರುದಾರರೇ ಪ್ರಕರಣಗಳನ್ನು ಹಿಂದೆ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ . ಸದರಿ ಪ್ರಕರಣಗಳಲ್ಲಿಯ ಅಂತಿಮ ಆದೇಶವನ್ನು ನಾನು ಓದಿ ನೋಡಿಲ್ಲ.

2. ನಾನು ಎಸ್ ಬಿ ಐ ಮುಂದುಗೋಡ ಶಾಖೆಯಲ್ಲಿ 2008 ಕ್ಕಿಂತ ಪೂರ್ವದಿಂದಲೂ ಖಾತೆಯನ್ನು ಹೊಂದಿದ್ದೇನೆ ಎಂದರೆ ನಿಜ. ಸದರಿ ಖಾತೆಗೆ ಸಂಬಂಧಿಸಿದಂತೆ 2011-12 ನೇ ಸಾಲಿನ ಪಾಸ್ ಬುಕ್ ನನ್ನ ಬಳಿ ಇದೆಯೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ದೂರುದಾರರು ನನಗೆ ಡಿಡಿ ನಂಃ 807332 ನೇದ್ದರ ಮುಖಾಂತರ 2 ಲಕ್ಷ ರೂಪಾಯಿ ಹಣವನ್ನು ದಿಃ 30-11-2011 ರಂದು ನೀಡಿದ್ದಾರೆ ಎಂದರೆ ಸಾಕ್ಷಿಯು ಆತ ನನಗೆ ನೀಡಬೇಕಾಗಿದ್ದ ಹಣವನ್ನು ನೀಡಿದ್ದಾನೆ ಎಂದು ನುಡಿಯುತ್ತಾರೆ. ಅದೇ ದಿನ ನಾನು ದೂರುದಾರನಿಂದ 4 ಲಕ್ಷ 50 ಸಾವಿರ ರೂಪಾಯಿಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ . ನಾನು ಆ ದಿನ ಒಟ್ಟು 6 ಲಕ್ಷ 50 ಸಾವಿರ ರೂಪಾಯಿಗಳನ್ನು ಕೈಗಡ ಸಾಲವಾಗಿ ದೂರುದಾರನಿಂದ ಪಡೆದುಕೊಂಡಿದ್ದೆ ಎನ್ನುವುದು ಸರಿಯಲ್ಲ .

3. ನಾನು ದೂರುದಾರನಿಗೆ ಹಣವನ್ನು ಆತ ನನಗೆ ಡಿಡಿ ನೀಡಿದ್ದ 1 ವರ್ಷದ ಹಿಂದೆ ನೀಡಿದ್ದೆ. ನಾನು ದೂರುದಾರನಿಗೆ ಹಣ ನೀಡಿರುವ ದಿನಾಂಕ ನೆನಪಿಲ್ಲ. ಈ ಪ್ರಕರಣದ ಸಮನ್ಸ ಜಾರಿಯಾಗುವುದಕ್ಕಿಂತ ಮುಂಚೆ ನನಗೆ ವಕೀಲರಿಂದ ನೋಟಿಸು ಬಂದಿತ್ತು ಎಂದರೆ ನಿಜ. ಸದರಿ ನೋಟಿಸಿಗೆ ನಾನು ಹುಬ್ಬಳ್ಳಿಯ ವಕೀಲರಾದ ಹೆಚ್ ವಿ ಕೆ ಮೂರ್ತಿ ಯವರ ಮೂಲಕ ಉತ್ತರ ನೀಡಿದ್ದೇನೆ ಎಂದರೆ ನಿಜ. ಸದರಿ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೆ ಮತ್ತು ಅವರು ನೀಡಿದ ಉತ್ತರವನ್ನು ನಾನು ಓದಿ ನೋಡಿದ್ದೇನೆ. ನನಗೆ ಕೊಡಬೇಕಾಗಿದ್ದ ಹಣದ ಕುರಿತು ದೂರುದಾರ 2 ಲಕ್ಷ ರೂಪಾಯಿಯ ಡಿಡಿ ನೀಡಿರುತ್ತಾನೆ ಎನ್ನುವ ವಿಷಯವನ್ನು ನೋಟಿಸಿನ ಉತ್ತರದಲ್ಲಿ ಬರೆಯಿಸಿಲ್ಲ.

4. ನಿಪಿ–1 ಎಂದು ಗುರುತಿಸಲಾಗಿರುವ ಚೆಕ್ಕನ್ನು ನಾನು ಈಗ ನೋಡುತ್ತಿದ್ದು, ಅದರಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.